ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ —1—

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ ರವರಿಗೆ ಮಂಡಿಸಿದೆ.

ವಿಷಯ:- Modified Estimate for Construction of 1st Floor Womens training Building at Kodigehalli in ward no. 8, Kodigehalli sub division

-****-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಯಲಹಂಕ ವಲಯ, ಬ್ಯಾಟರಾಯನಪುರ ವಿಭಾಗ ಕೊಡಿಗೇಹಳ್ಳಿ ಉಪವಿಭಾಗದ ವಾರ್ಡ್ ನಂ, 8ರ ವ್ಯಾಪ್ತಿಯಲ್ಲಿ ಮಹಿಳಾ ತರಬೇತಿ ಕೇಂದ್ರ ಕಟ್ಟಡ ನಿರ್ಮಾಣ ಮಾಡಲು ಅಂದಾಜು ಪಟ್ಟಿಯು ವರ್ಕ್ ಕೋಡ್ 008-12-000053 ಪಡೆದು ರೂ. 15.00ಲಕ್ಷಗಳಿಗೆ ಅನುಮೋದನೆಯಾಗಿದ್ದು, ಸದರಿ ಕಾಮಗಾರಿಗೆ ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆದು ಟೆಂಡರ್ ಮೊತ್ತ ರೂ 12.55 ಲಕ್ಷಗಳಿಗೆ ಗುತ್ತಿಗೆದಾರರಾದ ಶ್ರೀ ಸುಬ್ಬರೆಡ್ಡಿರವರಿಗೆ ಕಾಮಗಾರಿಯನ್ನು ನಿರ್ವಹಿಸಲು ಕಾಮಗಾರಿಯ ಕಾರ್ಯಾದೇಶವನ್ನು ನೀಡಲಾಗಿರುತ್ತದೆ.

ಸದರಿ ಗುತ್ತಿಗೆದಾರರು ಕೆಲಸ ಪ್ರಾರಂಭಿಸಿದಾಗ ಅಂದಾಜಿನಲ್ಲಿರುವ ಕೆಲವು ಐಟಂಗಳಲ್ಲಿನ ಪರಿಮಾಣದಲ್ಲಿ ವ್ಯತ್ಯಾಸ ಕಂಡುಬಂದಿರುವುದರಿಂದ ಸದರಿ ಕಾಮಗಾರಿಯ ಮಾರ್ಪಾಟು ಅಂದಾಜು ಪಟ್ಟಿಯನ್ನು ರೂ.1255735.20ಗಳಿಗೆ ತಯಾರಿಸಿ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಸದರಿ ನವೀಕೃತ ಅಂದಾಜು ಪಟ್ಟಿಯನ್ನು ಗುತ್ತಿಗೆದಾರರ ಟೆಂಡರ್ ದರಗಳ ಆಧಾರದ ಮೇಲೆ ಮತ್ತು 2012-13ನೇ ಸಾಲಿನ ಲೋಕೋಪಯೋಗಿ ದರಪಟ್ಟಿ ದರಗಳ ಮೇಲೆ ತಯಾರಿಸಲಾಗಿದೆ.

ಈ ಕಾಮಗಾರಿಯ ಮೂಲ ಅಂದಾಜು ಪಟ್ಟಿಯಲ್ಲಿರುವ ಐಟಂಗಳನ್ನು ನವೀಕೃತ ಅಂದಾಜು ಪಟ್ಟಿಯ ಐಟಂಗಳೊಂದಿಗೆ ಹೋಲಿಕೆ ಮಾಡಿ ತುಲನಾತ್ಮಕ ಪಟ್ಟಿ (Work Slip) ಯನ್ನು ತಯಾರಿಸಲಾಗಿದೆ. ಈ ತುಲನಾತ್ಮಕ ಪಟ್ಟಿ (Work Slip) ಯಲ್ಲಿರುವಂತೆ ನವೀಕೃತ ಅಂದಾಜುಪಟ್ಟಿಯ ಮೊತ್ತವು ಮೂಲ ಅಂದಾಜು ಪಟ್ಟಿಗೆ ಸರಿಸಮಾನಾಗಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಈ ಮಾರ್ಪಾಟು ಅಂದಾಜು ಪಟ್ಟಿಯಿಂದ, ಬಿಬಿಎಂಪಿಗೆ ಯಾವುದೇ ಆರ್ಥಿಕ ಹೊರೆ ಆಗದೇ ಇರುವುದು ಕಂಡು ಬಂದಿದೆ.

ಆದಕಾರಣ ಸದರಿ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಲು ಪರಿಷ್ಕೃತ ಅಂದಾಜು ಪಟ್ಟಿ ರೂ.1255735.20ಗಳಿಗೆ ತಯಾರಿಸಿ ಮಂಜೂರಾತಿಯನ್ನು ನೀಡಲು ಕಡತವನ್ನು ಮಂಡಿಸಲಾಗಿದೆ.

ಸಹಾಯಕ ಅಭಿಯಂತರರು
ವಾರ್ಡ್ ನಂ.08

ಸಹಾಯಕ ಕಾರ್ಯಪಾಲಕ ಅಭಿಯಂತರರು
ಕೊಡಿಗೇಹಳ್ಳಿ ಉಪವಿಭಾಗ
12/12/13

DM
12/12/2013

Workshed Industrial Building (GF+1F) at Kodigehalli.

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಂಡಿಕೆ(1)ರಿಂದ(3)ರವರೆಗಿನ ವರದಿಯನ್ನು ತಮ್ಮ ಅವಗಾಹನೆಗೆ ತರಲಾಗಿದೆ.

ಯಲಹಂಕ ವಲಯ, ಬ್ಯಾಟರಾಯನಪುರ ವಿಭಾಗ ಕೊಡಿಗೇಹಳ್ಳಿ ಉಪವಿಭಾಗದ ವಾರ್ಡ್ ನಂ, 8ರ ವ್ಯಾಪ್ತಿಯಲ್ಲಿ ಮಹಿಳಾ ತರಬೇತಿ ಕೇಂದ್ರ ಕಟ್ಟಡ ನಿರ್ಮಾಣ ಮಾಡಲು ಅಂದಾಜು ಪಟ್ಟಿಯು ವರ್ಕ್ ಕೋಡ್ 008–12–000053 ಪಡೆದು ರೂ. 15.00ಲಕ್ಷಗಳಿಗೆ ಅನುಮೋದನೆಯಾಗಿದ್ದು, ಸದರಿ ಕಾಮಗಾರಿಗೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆದು ಟೆಂಡರ್ ಮೊತ್ತ ರೂ 12.55 ಲಕ್ಷಗಳಿಗೆ ಗುತ್ತಿಗೆದಾರರಾದ ಶ್ರೀ ಸುಬ್ಬರೆಡ್ಡಿರವರಿಗೆ ಕಾಮಗಾರಿಯನ್ನು ನಿರ್ವಹಿಸಲು ಕಾಮಗಾರಿಯ ಕಾರ್ಯಾದೇಶವನ್ನು ನೀಡಲಾಗಿರುತ್ತದೆ.

ಸದರಿ ಗುತ್ತಿಗೆದಾರರು ಕೆಲಸ ಪ್ರಾರಂಭಿಸಿದಾಗ ಅಂದಾಜಿನಲ್ಲಿರುವ ಕೆಲವು ಐಟಂಗಳಲ್ಲಿನ ಪರಿಮಾಣದಲ್ಲಿ ವ್ಯತ್ಯಾಸ ಕಂಡುಬಂದಿರುವುದರಿಂದ ಸದರಿ ಕಾಮಗಾರಿಯ ನವೀಕೃತ ಅಂದಾಜು ಪಟ್ಟಿಯನ್ನು ಗುತ್ತಿಗೆದಾರರ ಟೆಂಡರ್ ದರಗಳ ಆಧಾರದ ಮೇಲೆ ಮತ್ತು 2012–13ನೇ ಸಾಲಿನ ಲೋಕೋಪಯೋಗಿ ದರಪಟ್ಟಿ ದರಗಳ ಮೇಲೆ ರೂ.1255735.20ಗಳಿಗೆ ತಯಾರಿಸಿ ಅನುಮೋದನೆಗಾಗಿ ಸ.ಕಾ.ಅ(ಕೊ.ಉ.ವಿ)ರವರು ಸಲ್ಲಿಸಿರುತ್ತಾರೆ.

ಆದಕಾರಣ ಸದರಿ ಕಾಮಗಾರಿಯ ಪರಿಷ್ಕೃತ ಅಂದಾಜು ಪಟ್ಟಿಯ ಮೊತ್ತವಾದ ರೂ.1255735.20ಗಳಿಗೆ ಮಂಜೂರಾತಿಯನ್ನು ನೀಡಲು ಕೋರುತ್ತಾ ಕಡತವನ್ನು ಮಂಡಿಸಲಾಗಿದೆ.

12/2/2013

CE (YLNK)

18/02/13

ಅಭಿಪ್ರಾಯ: ಕಂಡಿಕೆ 1ರಿಂದ 6ರ ವರೆಗಿನ ವಿಷಯವನ್ನು ಅವಗಾಹನೆಗೆ ತರಲಾಗಿದೆ. ಸದರಿ ಕಾಮಗಾರಿಯ ಅನುಷ್ಠಾನದ ಸಮಯದಲ್ಲಿ ಕೆಲವು ಪಿಬಂಯ್ ಪರಿಮಾಣದಲ್ಲಿ ಬಂದ ವ್ಯತ್ಯಾಸವನ್ನು ಪರಿಗಣಿಸಿ ರೂ 12,55,735 ಗಳಿಗೆ ಸಾರ್ವಜನಿಕ ಆಯವ್ಯಯದಲ್ಲಿ ಅಂದಾಜು ಪತ್ರಿಕೆಯ "ಅನುಮೋದನೆ"ಗಾಗಿ ಕಡತವನ್ನು ಜಂಟಿ-ಆಯುಕ್ತರ ಕಛೇರಿಗೆ ಸಲ್ಲಿಸಲಾಗಿದೆ.

27.02.13

ಮು.ಅ.(ಯ): ಮೇಲಿನಂತೆ ಅಂದಾಜು, ವಿವರಣೆ, ಅನುಮೋದಿಸಿರುವುದಾಗಿದೆ.

J-J.

Chief Engineer
Yelahanka Zone
Greater Bangalore Mahanagara Palike
Bangalore-92

ಜಂಟಿ ಆಯುಕ್ತರು

ಕಾ.ಅ (ತಾ.ಗ) ನಂತೆ ಮಾಡಿದೆ.